ತಕ್ಷಣ ಕ್ರಮ ತೆಗೆದುಕೊಳ್ಳಬೇಕೆನ್ನುವಂಥ ವಿಷಯವನ್ನು ಇಂಧನ ಸಚಿವರಿಗೆ ತಿಳಿಸುವಂಥ ಕೆಲಸವನ್ನು ನಾನು ಮಾಡುತ್ತೇನೆ.

(12) ವಿಷಯ: ಪದವಿ ಪೂರ್ವ ಕಾಲೇಜು ಕಟ್ಟಡ ಕುರಿತು.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ನನ್ನದು ಇನ್ನೂ ಎರಡು ವಿಚಾರಗಳು ಇವೆ.

ಅಧ್ಯಕ್ಷರು: ನಾಳೆ ಅವಕಾಶ ಕೊಡುತ್ತೇನೆ. ಸಂಬಂಧಪಟ್ಟ ಮಂತ್ರಿಗಳು ಬರಲಿ. ಸುಮ್ಮನೆ ಇವರು ಓದುತ್ತಾರೆ, ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಮಾನ್ಯ ಅಧ್ಯಕ್ಷರೆ, ಪದವಿ ಪೂರ್ವ ಕಾಲೇಜು ಕಟ್ಟಡದ ಬಗ್ಗೆ ಮಾನ್ಯ ಹೊರಟ್ಟಿಯವರ ಇಲಾಖೆಗೆ ಬರುತ್ತದೆ. ನಾವು 2006–2007ರಲ್ಲಿ ಅನುದಾನವನ್ನು ಬಿಡುಗಡೆ ಮಾಡಿಕೊಟ್ಟಿದ್ದೇವೆ. ಮೂರು ಪದವಿ ಪೂರ್ವ ಕಾಲೇಜಿಗೆ 25–25 ಲಕ್ಷ ರೂಪಾಯಿಯಂತೆ ನಾವು ಹಣವನ್ನು ಮಂಜೂರು ಮಾಡಿ ಕೊಟ್ಟಿದ್ದೇವೆ. ಅದು 2006–2007ರ ಆಯವ್ಯಯದಲ್ಲಿ ಬಂದಿದೆ. ಆದರೆ ಇನ್ನೂ ಕೂಡ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು tender ಕರೆದು ಕಾಲೇಜು ಕಟ್ಟಡದ ಕೆಲಸವನ್ನು ಪ್ರಾರಂಭ ಮಾಡಿಲ್ಲ. ಅಲ್ಲಿ ಕಟ್ಟಡವನ್ನು ಕಟ್ಟುವುದಕ್ಕೆ ಜಮೀನು ಕೊಟ್ಟಿದ್ದೇವೆ. ಅವರಿಗೆ ಅವಶ್ಯಕತೆಗೆ ಬೇಕಾದಂತಹ ಎಲ್ಲಾ ದಾಖಲೆಗಳನ್ನು ಪೂರೈಸಿದ್ದೇವೆ. ಇವತ್ತು ಮಾನ್ಯ ಹೊರಟ್ಟಿಯವರು ರಾಜ್ಯದಲ್ಲಿ ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಕೊಡುತ್ತಿದ್ದಾರೆ, ಅದನ್ನು ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ: ಅದನ್ನು ರೇವಣ್ಣನವರು ಕೊಡುತ್ತಿರುವುದು.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಅದು ನಮಗೆ ಗೊತ್ತಿಲ್ಲ. ನೀವು ಏನು ಹೇಳಿದರೂ ಕೂಡ ನಾವು ಮಾತ್ರ ಹೊರಟ್ಟಿಯವರು ಕೊಟ್ಟಿರುವುದು ಎಂದು ಹೇಳುತ್ತೇವೆ. ನೀವು ಯಾರ ಹೆಸರು ಹೇಳಿದರೂ ನಾವು ಒಪ್ಪುವುದಿಲ್ಲ. ಅವರಿಂದ ರುಜು ಆಗಿದೆ ಎಂದರೆ ನಾವು ಹೊರಟ್ಟಿಯವರೆ ಮಾಡಿದ್ದಾರೆಂದು ಹೇಳುತ್ತೇವೆ. ನೀವು ರಾಜಕೀಯವಾಗಿ ಏನಾದರೂ ಹೇಳಿಕೊಳ್ಳಿ. ಅದು

ನಮಗೆ ಗೊತ್ತಿಲ್ಲ. ಆದರೆ ಇವತ್ತು ನಮ್ಮ ಜಿಲ್ಲೆಗೆ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಕೊಟ್ಟಿದ್ದಾರೆ. ಮಕ್ಕಳಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಲೋಕೋಪಯೋಗಿ ಇಲಾಖೆಯ ಆಯವ್ಯಯದಲ್ಲಿ ಹಣವನ್ನು ಸೇರಿಸಿದರೂ ಕೂಡ ಇವತ್ತು ಕಟ್ಟಡ ಪ್ರಾರಂಭವಾಗಿಲ್ಲ. ಮಾನ್ಯ ಹೊರಟ್ಟಿಯವರು ಇದನ್ನು ಏಕೆ ಪ್ರಾರಂಭ ಮಾಡಿಲ್ಲ? ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ಹೇಳಬೇಕು. ಅದರ ವಿಚಾರದಲ್ಲಿ ಅಧಿಕಾರಿಗಳು ಏಕೆ ಹಿಂಜರಿಯುತ್ತಿದ್ದಾರೆಂದು ಸಂಪೂರ್ಣವಾದಂತಹ ಮಾಹಿತಿಯನ್ನು ಹೇಳಬೇಕು. ಅದರ ವರದಿಯನ್ನು ತರಿಸಿ ಕೊಡುತ್ತೇನೆಂದು ಹೇಳುವುದಕ್ಕೆ ಹೋಗಬೇಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಪ್ರಕಾಶ್‌ರವರು ಹೇಳುವುದರಲ್ಲೂ ಅರ್ಥವಿದೆ. ಮಾನ್ಯ ಶ್ರೀನಿವಾಸ ಗೌಡರು ಹೇಳುವುದರಲ್ಲೂ ಅರ್ಥವಿದೆ.

ಶ್ರೀ ಬಸವರಾಜ್ ಎಸ್.ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಕಾಶ್ ಹುಕ್ಕೇರಿಯವರು ಹೇಳಿದ ವಿಚಾರದಲ್ಲಿ ಮಾಹಿತಿಯನ್ನು ತರಿಸುತ್ತಿದ್ದೇನೆ. ನಾನು ಎಂಟತ್ತು ದಿವಸದಲ್ಲಿ ಕೆಲಸ ಪ್ರಾರಂಭ ಮಾಡುವಂತೆ ನಿರ್ದೇಶನವನ್ನು ಕೊಡುತ್ತಿದ್ದೇನೆ. ನಾವು ಲಿಸ್ಟ್ ಮಾಡಿ ಹೈಸ್ಕೂಲನ್ನು RDPR Department ಗೆ Junior college ಅನ್ನು PWD Department ಗೆ ಕೊಡುವಂತಹ ರೀತಿಯಲ್ಲಿ ಮಾಡಿದೆವು. ಆದರೆ ಕಟ್ಟಡ ಕಟ್ಟುವುದಕ್ಕೆ ದುಡ್ಡಿರಲಿಲ್ಲ. ಮೊನ್ನೆ ಮೊನ್ನೆ RIDF ನಲ್ಲಿ ದುಡ್ಡು release ಮಾಡುವ ಹಾಗೆ ಮಾಡಿದ್ದೇವೆ. ಈಗಾಗಲೇ ಎರಡು ಕಂತು release ಆಗಿದೆ. ಇನ್ನೊಂದು ಕಂತು release ಆಗಬೇಕು. ಏಕೆ ನಿಂತಿದೆ ಎಂದು ನೋಡಿ ಎಂಟು ದಿವಸದೊಳಗೆ ಪ್ರಾರಂಭ ಮಾಡುವ ಹಾಗೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಅವರು ಒಂದು ವಾರದೊಳಗೆ ಎಂದು ಹೇಳಿದ್ದಾರೆ. ನೀವು ಮತ್ತೆ ಏಕೆ ಚರ್ಚೆ ಮಾಡುತ್ತೀರಿ?

ಶ್ರೀ ಬಸವರಾಜ್ ಎಸ್.ಹೊರಟ್ಟಿ: RIDF ಅವರದಲ್ಲ. ಹೊಸ ಕಾಲೇಜ್ ಪ್ರಾರಂಭ ಮಾಡಿದಾಗ RIDF ನಲ್ಲಿ ಹಣವನ್ನು ಮಂಜೂರಾತಿ

ಮಾಡುತ್ತಿದ್ದೇವೆ. ಇದು ಹಳೇ ಕಾಲದ್ದು, ಎರಡು ಕಂತು release ಆಗಿದೆ. ಇನ್ನೊಂದು ಕಂತು release ಆಗಬೇಕು. ತಕ್ಷಣ release ಮಾಡುವುದಕ್ಕೆ.....

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಕಂತು ಅಲ್ಲ,

(13) ವಿಷಯ: ಕೃಷಿ ಇಲಾಖೆಯಲ್ಲಿ ಜೈವಿಕ ಗೊಬ್ಬರ, ಕೀಟನಾಶಕ, ಜಿಪ್ಸಂ ಕೊರತೆ ಬಗ್ಗೆ.

ಶ್ರೀ ಆರ್.ಧ್ರುವನಾರಾಯಣ್: ಮಾನ್ಯ ಅಧ್ಯಕ್ಷರೆ, ಈ ಬಾರಿ ರಾಜ್ಯದ ಎಲ್ಲಾ ಕಡೆ ಉತ್ತಮವಾಗಿ ಮಳೆಯಾಗಿದೆ. ಆದರೆ ರೈತ ಸಂಪರ್ಕ ಕೇಂದ್ರಗಳಲ್ಲಿ ಜೈವಿಕ ಗೊಬ್ಬರ, ಜೈವಿಕ ಕೀಟನಾಶಕ ಮತ್ತು ಜಿಪ್ಸಂ ಸಿಗುತ್ತಿಲ್ಲ. ಎಲ್ಲಾ ಜಿಲ್ಲೆಗಳಲ್ಲಿ ಜೂನ್, ಜುಲೈನಲ್ಲಿ ಮಳೆಯಾಗಿದೆ. ಆಗಸ್ಟ್ ತಿಂಗಳು ಬಂತು. ಆದರೆ ಕೃಷಿ ಇಲಾಖೆಯಿಂದ bio pesticides, fertilizers and gypsum supply ಆಗುತ್ತಿಲ್ಲ. ರೈತರಿಗೆ ತತ್‌ಕ್ಷಣ ಅನುಕೂಲವಾಗಬೇಕು. ಅದು ಬೇಡಿಕೆ ಇದೆ. ಅದು ಇನ್ನೂ ಕೂಡ ವಿತರಣೆಯಾಗುತ್ತಿಲ್ಲ. ಅವುಗಳನ್ನು ಕೂಡಲೇ ರೈತ ಸಂಪರ್ಕ ಕೇಂದ್ರಗಳಿಗೆ ರೈತರಿಗೆ ವಿತರಿಸುವಂತಹ ಕೆಲಸವಾಗಬೇಕು ಎಂದು ತಮ್ಮ ಮೂಲಕ ಒತ್ತಾಯವನ್ನು ಮಾನ್ಯ ಮಂತ್ರಿಗಳಿಗೆ ಮಾಡುತ್ತೇನೆ.

ಶ್ರೀ ಬಸವರಾಜ್ ಎಸ್.ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಈಗ ಗಮನಕ್ಕೆ ಬಂದಿದೆ. ಇದನ್ನು ಮಾನ್ಯ ಸಂಬಂಧಪಟ್ಟವರ ಸಚಿವರಿಗೆ ಕಳುಹಿಸಿ ಉತ್ತರವನ್ನು ಕೊಡಿಸುತ್ತೇನೆ.

ಅಧ್ಯಕ್ಷರು: ನಿಮಗೆ ಉತ್ತರ ಬಂದಿಲ್ಲವೇ? ಅವರು ಅವತ್ತೇ ಕೇಳಿದ್ದಾರಲ್ಲ, ಅದು ಸರ್ಕಾರಕ್ಕೆ ಹೋಗಿದೆಯಲ್ಲ.

ಶ್ರೀ ಬಸವರಾಜ್ ಎಸ್.ಹೊರಟ್ಟಿ: ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು: ಉತ್ತರ ಬಂದಿಲ್ಲವೇ?

ಶ್ರೀ ಬಸವರಾಜ್ ಎಸ್.ಹೊರಟ್ಟಿ: ಇಲ್ಲ ಉತ್ತರ ಬಂದಿಲ್ಲ.

ಶ್ರೀ ಆರ್.ಧ್ರುವನಾರಾಯಣ್: ಮಾನ್ಯ ಅಧ್ಯಕ್ಷರೆ, 30ನೇ ತಾರೀಖು ತಮಗೆ ಒಂದು ಪತ್ರವನ್ನು ಕಳುಹಿಸಿದ್ದೇನೆ.